ಕರ್ನಾಟಕದಲ್ಲಿ ನೀರಾವರಿ ಯೋಜನೆಗಳು

೧೧೨೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).–ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭–೮೮ರ ಆಯವ್ಯಯದಲ್ಲಿ ಕರ್ನಾಟಕದಲ್ಲಿ ನೀರಾವರಿ ಯೋಜನೆಗಳಿಗೆ ಒದಗಿಸಲಾದ ಮೊತ್ತವೆಷ್ಟು ?

ಆ) ರಾಜ್ಯದಲ್ಲಿ ೧೯೮೭–೮೮ರಲ್ಲಿ ಇದುವರೆವಿಗೆ ಮೇಜರ್ ಮತ್ತು ಮೈನರ್ಸ್ ಇರಿಗೇಷನ್‌ಗೆ ಖರ್ಚು ಮಾಡಿದ ಮೊತ್ತವೆಷ್ಟು ಮತ್ತು ಇದರಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ)

		ಆಯವ್ಯಯ ಪಟ್ಟಿಯಲ್ಲಿ ನಿಗಧಿಗೊಳಿಸಲಾಗಿದ್ದ ಮೊತ್ತ	ಪರಿಷ್ಕೃತ ಯೋಜನೆಯ ಪ್ರಕಾರ
		(ಕೋಟಿ ರೂ.ಗಳಲ್ಲಿ)	
೧	ಭಾರಿ ಮತ್ತು ಮಧ್ಯಮ ನೀರಾವರಿಗಾಗಿ	೨೮೫.೩೦	೧೬೩.೦೦
೨	ಸಣ್ಣ ನೀರಾವರಿಗಾಗಿ	೩೨.೯೬	೩೧.೪೬
	ಒಟ್ಟು	೩೧೮.೨೬	೧೯೪.೪೬

ಆ)

		ಭಾರಿ ಮತ್ತು ಮಧ್ಯಮ ನೀರಾವರಿಗಾಗಿ	ಸಣ್ಣ ನೀರಾವರಿಗಾಗಿ	ಒಟ್ಟು
೧	ಫೆಬ್ರುವರಿ ೮೮ರ ಅಂತ್ಯದ ವರೆಗಿನ ಖರ್ಚು (ಕೋಟಿ ರೂ.ಗಳಲ್ಲಿ)	೧೧೨.೦೨	೧೮.೦೨	೧೩೦.೦೪
೨	ಫೆಬ್ರುವರಿ ೮೮ರ ಅಂತ್ಯದ ವರೆಗೆ ಕಲ್ಪಿಸಲಾದ ನೀರಾವರಿ ಸಾಮರ್ಥ್ಯ (ಹೆಕ್ಟೇರುಗಳಲ್ಲಿ)	೧೦೭೮೩	೨೫೬೩	೧೩೩೪೬

ಕ್ಯಾಪಿಟೇಷನ್ ಹಾಗೂ ಡೊನೇಷನ್ ಫೀ ರದ್ದಿನ ಬಗ್ಗೆ

೧೧೦೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).–ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕ್ಯಾಪಿಟೇಶನ್ ಹಾಗೂ ಡೊನೇಶನ್ ಶುಲ್ಕವನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ರದ್ದು ಗೊಳಿಸುವ ಬಗೆಗಿನ ಸರ್ಕಾರದ ನಿರ್ದಿಷ್ಟ ಕ್ರಮಗಳೇನು ?

ಆ) ಹಾಗಿದ್ದಲ್ಲಿ, ಈ ಆಜ್ಞೆಯು ಯಾವಾಗ ಜಾರಿಗೆ ಬರುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ರದ್ದತಿ) ಕಾಯ್ದೆ ೧೯೮೪ರ ಸೆಕ್ಷನ್ ೩ರ ರೀತ್ಯ, ದಿನಾಂಕ ೧೧-೭-೮೮ರಿಂದ ರಾಜ್ಯದ ಯಾವ ವಿದ್ಯಾಸಂಸ್ಥೆಗಳೂ ಕ್ಯಾಪಿಟೇಶನ್ ಶುಲ್ಕ ತೆಗೆದುಕೊಳ್ಳುವಂತಿಲ್ಲ.

ಆ) ಮೇಲೆ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣದ ಬಗ್ಗೆ

೧೨೪೬. ಶ್ರೀ ಯು. ಭೂಪತಿ (ಸಂಡೂರು) –ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ತಾಲ್ಲೂಕು ತೋರಣಗಲ್ಲು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಟೆಂಡರ್ ಅವಧಿಯು ಮುಗಿದಿರುವುದು ನಿಜವಲ್ಲವೆ ?

ಆ) ಇಲ್ಲಿಯವರೆಗೂ ಕಟ್ಟಡ ಕಟ್ಟಲು ಪ್ರಾರಂಭವಾಗದಿರಲು ಕಾರಣವೇನು ?

ಇ) ಹಾಗಿದ್ದಲ್ಲಿ, ಯಾವಾಗ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ

ಆ) ಮಿತವ್ಯಯದ ಆದೇಶದ ಕಾರಣ, ಈ ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸಿಲ್ಲ.

ಇ) ಈ ಕೆಲಸವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತಿದ್ದು, ೧೯೮೮-೮೯ರಲ್ಲಿ ಪ್ರಾರಂಭಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

ತೋಟಗಾರಿಕಾ ಬೆಳೆಗಾರರ ಸಹಕಾರಿ ಸಂಘಗಳ ಸ್ಥಾಪನೆ ಬಗ್ಗೆ

೧೨೫೦. ಶ್ರೀ ಯು. ಭೂಪತಿ (ಸಂಡೂರು).–ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಾರರ ಸಹಕಾರಿ ಸಂಘಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ ಹಾಗೂ ಒಟ್ಟು ಎಷ್ಟು ಶಾಖೆಗಳಿವೆ ?

ಆ) ಸದರಿ ಸಹಕಾರಿ ಸಂಘಗಳು ಲಾಭದ ಹಾದಿಯಲ್ಲಿವೆಯೆ ?

ಇ) ಕನಿಷ್ಟ ಜಿಲ್ಲಾ ಕೇಂದ್ರದಲ್ಲಿ ಒಂದರಂತೆಯಾದರೂ, ಇಂತಹ ಸಹಕಾರಿ ಸಂಘಗಳನ್ನು ಸ್ಥಾಪಿಸಿ ರೈತರಿಗೂ ಮತ್ತು ಗ್ರಾಹಕರಿಗೂ ಅನುಕೂಲ ಮಾಡುವ ಯೋಜನೆ ಏನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಪೈ. ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ತೋಟಗಾರಿಕೆ ಇಲಾಖೆ ರೂಪಿಸಿರುವ ಸಾಮಾನ್ಯ ಬೈಲಾ ಮೇರೆಗೆ ಈವರೆಗೆ ತುಮಕೂರು, ಚಿತ್ರದುರ್ಗ, ಮಂಡ್ಯ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಬೆಳಗಾಂ, ಬಿಜಾಪುರ, ಉತ್ತರ ಕನ್ನಡ, ಧಾರವಾಡ, ರಾಯಚೂರು, ಬಳ್ಳಾರಿ, ಗುಲ್ಬರ್ಗಾ ಮತ್ತು ಬೀದರ್ ಈ ೧೪ ಜಿಲ್ಲೆಗಳಲ್ಲಿ ಜಿಲ್ಲಾ ತೋಟಗಾರಿಕೆ ಉತ್ಪನ್ನಗಳ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಸದರಿ ಸಂಸ್ಥೆಗಳ ಶಾಖೆಗಳನ್ನು ಈವರೆಗೆ ಸ್ಥಾಪಿಸಲಾಗಿರುವುದಿಲ್ಲ.

ಆ) ೧೯೮೬-೮೭ರ ಸಾಲಿಗೆ ಆರು ಮಾತ್ರ ಲಾಭದಲ್ಲಿವೆ.

ಇ) ಪ್ರತಿ ಜಿಲ್ಲೆಯಲ್ಲಿಯೂ ಇಂತಹ ಸಂಸ್ಥೆಗಳು ಸ್ಥಾಪಿತವಾಗಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ.